www.ecourtsindia.com

# ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
# ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

## ಅಪರಾಧ ಪ್ರಕರಣ ಸಂಖ್ಯೆ 785/2017

**ಚಾಸಾಃ 8      ಫ್ರಾಸಾಃ 6**

| | |
|---|---|
| ಹೆಸರು | : ಜಯಂತ ಪೂಜಾರಿ |
| ತಂದೆಯ ಹೆಸರು | : ದಿ. ದುಗ್ಗಣ್ಣ ಗೌಡ |
| ಪ್ರಾಯ | : 36 ವರ್ಷ |
| ಉದ್ಯೋಗ | : ಆಟೋ ಚಾಲಕ |
| ವಾಸ | : ಚಿಬಿದ್ರೆ  ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ  10-9-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು  ನಿಪಿ-9 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2017 ರಲ್ಲಿ ಚಾರ್ಮಾಡಿ ಚೆಕ್  ಪೋಸ್ಟ್ ಹತ್ತಿರ ಹಾಕಿರುತ್ತೇನೆ,  ನಿಪಿ-9 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ 2 ದ್ವಿಚಕ್ರ ವಾಹನಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ, ಬೇರೆ ಯಾವುದೇ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.  ಚಾಸಾ-7 ರವರು ಇದ್ದರು, ಬೇರೆ ಯಾರು ಇದ್ದರು ಎಂದು ನೆನಪಿರುವುದಿಲ್ಲ. ಸಂಜೆ 4 ರಿಂದ 5 ಗಂಟೆ ವರೆಗೆ ನಿಪಿ-9 ನ್ನು ಜರುಗಿಸಲಾಗಿರುತ್ತದೆ.  ದ್ವಿಚಕ್ರ ವಾಹನದ ಫೋಟೋಗಳನ್ನು ನೋಡಿ ಗುರುತಿಸಲು ನಿರಾಕರಿಸಿರುತ್ತಾರೆ.  ಆರೋಪಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

*(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕಾಗಿ ಕೋರಿದಂತೆ  ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ ಮಾನ್ಯ ಸ. ಸ. ಅ.  ರವರಿಂದಃ**

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-5.pdf

ದಿನಾಂಕ 27-7-2017 ರಂದು ಬೆಳ್ತಂಗಡಿ ತಾಲೂಕು ಚಾರ್ಮಾಡಿ ಗ್ರಾಮದಲ್ಲಿ ಸಂಜೆ 6 ರಿಂದ 7 ಗಂಟೆಗೆ ವರೆಗೆ ಮಹಜರ್ ಮಾಡಿ ಬಜಾಜ್ ಕಂಪನಿಯ ಕೆ ಟಿ ಎಂ ಡ್ಯೂಕ್ ಬೈಕ್ ಮತ್ತು ರಾಯಲ್ ಎನ್ಫೀಲ್ಡ್ ಕ್ಲಾಸಿಕ್ 350 ಬೈಕನ್ನು ಪೊಲೀಸರು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಅಂಗ ಜಪ್ತಿ ಮಾಡಿ ನೋಕಿಯ ಕಂಪನಿಯ ಮೊಬೈಲ್ ಫೋನ್ ಮತ್ತು ಕೆಚೋಡ ಕಂಪನಿಯ ಮೊಬೈಲ್ ಫೋನ್ ಮತ್ತು ಕಿಸೆಯಲ್ಲಿದ್ದ ರೂ.2500 ಹಣವನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಪಿ ಎಂ ವಕೀಲರಿಂದಃ**

ಸ್ಥಳಕ್ಕೆ ಬರುವಂತೆ ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ನಾನು ದಾರಿಯಲ್ಲಿ ಆಟೋದಲ್ಲಿ ಹೋಗುತ್ತಿದ್ದಾಗ ನಾನು ಸ್ಥಳದಲ್ಲಿ ನಾನಾಗೇ ಆಟೋವನ್ನು ನಿಲ್ಲಿಸಿದ್ದು ಆಗ ಪೊಲೀಸರು 2 ಬೈಕನ್ನು ಅಮಾನತುಪಡಿಸಿಕೊಳ್ಳುತ್ತಿರುವುದಾಗಿ ತಿಳಿಸಿ ಸಹಿ ಮಾಡಲು ಹೇಳಿರುತ್ತಾರೆ. ಸ್ಥಳದಲ್ಲಿ ಸುಮಾರು 10 ಜನರು ಸೇರಿದ್ದರು. ನನ್ನ ಆಟೋದಲ್ಲಿ ಪ್ರಯಾಣಿಕರು ಯಾರೂ ಇರಲಿಲ್ಲ. ನಿಪಿ-9 ಕೈ ಬರಹದ ದಾಖಲೆಯಾಗಿರುತ್ತದೆ. ಪೊಲೀಸರು ಸ್ಥಳಕ್ಕೆ ಬರುವಾಗ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಬಂದಿರಲಿಲ್ಲ. ನಿಪಿ-9 ನ್ನು ಜರುಗಿಸಿದ ಸ್ಥಳ ರಾಷ್ಟ್ರಿಯ ಹೆದ್ದಾರಿ ಎಂದರೆ ಸರಿ. ದ್ವಿಚಕ್ರ ವಾಹನಗಳನ್ನು ಉಜಿರೆ - ಮೂಡಿಗೆರೆ ಮಾರ್ಗದ ಎಡ ಭಾಗದಲ್ಲಿ ನಿಲ್ಲಿಸಲಾಗಿತ್ತು. ಯಾವ ಬಣ್ಣದ ದ್ವಿಚಕ್ರ ವಾಹನಗಳು ಮತ್ತು ಯಾರಿಗೆ ಸೇರಿದವು ಎಂದು ಹೇಳಲು ಆಗುವುದಿಲ್ಲ. ನನ್ನ ಸಮಕ್ಷಮ ಬೇರೆ ಯಾವುದೇ ವಾಹನಗಳನ್ನು ತಪಾಸಣೆ ಮಾಡಿರುವುದಿಲ್ಲ. ನಿಪಿ-9 ರಲ್ಲಿ ವಶಪಡಿಸಿಕೊಂಡ 2 ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿ ಬೇರೆ ದ್ವಿಚಕ್ರ ವಾಹನಗಳು ಇರಲಿಲ್ಲ. ಬೈಕುಗಳು ಯಾರಿಗೆ ಸೇರಿದವು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ-9 ರಂತೆ ವಶಪಡಿಸಿಕೊಂಡ ಬೈಕುಗಳು ಯಾವ ಪ್ರಕರಣದವು ಮತ್ತು ಅವುಗಳ ಮಾಲೀಕರು ಯಾರು ಮತ್ತು ಅವುಗಳನ್ನು ಯಾರಿಂದ ಯಾವ ದಿನಾಂಕ ವಶಪಡಿಸಿಕೊಳ್ಳಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಿನ ಸ್ಥಳದಲ್ಲಿ ಇದ್ದವರ ಬಳಿ ಮೊಬೈಲ್ ಫೋನ್ ಗಳು ಇದ್ದವು ಎಂದರೆ ಸರಿ. ಪೊಲೀಸರು ಮೊಬೈಲ್ ಫೋನುಗಳನ್ನು ಯಾರಿಂದ ಅಮಾನತುಪಡಿಸಿಕೊಂಡಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಮೊಬೈಲ್ ಗಳು ಯಾವ ಕಂಪನಿಗೆ ಸೇರಿದವು ಮತ್ತು ಯಾವ ಬಣ್ಣದವು ಎಂದು ಹೇಳಲು ಆಗುವುದಿಲ್ಲ. ಪೊಲೀಸರು ಹೇಳಿದ ಮೇರೆಗೆ ನಿಪಿ-9 ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ಪೊಲೀಸರು ನನ್ನನ್ನು ಠಾಣೆಗೆ ಯಾವತ್ತೂ ಬರಲು ಹೇಳಿರುವುದಿಲ್ಲ. ಪೊಲೀಸರು ಕರೆದಾಗ ನಾನು ಪೊಲೀಸಿ ಠಾಣೆಗೆ ಹೋಗುತ್ತಿರುತ್ತೇನೆ. 2017 ರಲ್ಲಿ ನಾನು ಠಾಣೆಗೆ ಹೋಗಿದ್ದಾಗ ಸಾಕ್ಷಿಗೆ ಸಹಿ ಹಾಕಿರುತ್ತೇನೆ, 2-3

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-5.pdf

ಬಾರಿ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಹೋಗಿರುತ್ತೇನೆ. ಸದರಿ ದಿನ ತಕ್ಷೀರು ಸ್ಥಳದಲ್ಲಿ ಇರಲಿಲ್ಲ, ನಿಪಿ-9 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

(ಸಾ. ಓ. ಹೇ. ಕೇ. ಸ. ಇ. ಎ. ಒ.)

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-5.pdf
www.ecourtsindia.com